ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಅವರ ಮಂಟ್ಪಿಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ೫೦ ಸೈಕಲ್ಸ್ ಮಾಡುವಂಥ ಪ್ರಶ್ನೆ ಬಂದಲ್ಲಿ ಮಾಡದೇ ಬೇರೆ ಮಾರ್ಗ ಇಲ್ಲ. ಏತಕ್ಕೋಸ್ಕರ ನಾನು ಹೇಳುತ್ತಿದ್ದೇನೆಂದರೆ, ೨೫ ಸೈಕಲ್ಸ್‌ನ ಈ ಚರಿತ್ರೆ ಇವತ್ತಿನದಲ್ಲ. ನೂರಾರು ವರ್ಷದ ಚರಿತ್ರೆ. ೨೫ ಸೈಕಲ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಈ ವಿದ್ಯುತ್ತನ್ನು ಭಾರತ್ ಗೋಲ್ಡ್ ಮೈನ್ಸ್ ಉಪಯೋಗಿಸಲು ಶಿವಸಮುದ್ರಂ ಜಲ ವಿದ್ಯುತ್ ಗಾರವನ್ನು ಮಾಡಲಾಗಿದೆ. ಆದ್ದರಿಂದ ಬೇರೆಯವರಿಗೆ ಇದರಿಂದ ವಿದ್ಯುತ್ ಕೊಡುವಂಥ ಪ್ರಶ್ನೆ ಬರುವುದಿಲ್ಲ. ಇದರಿಂದ ೫೦ ಸೈಕಲ್ಸ್ ಪರಿವರ್ತನೆ ಮಾಡುವಂಥ ಪ್ರಶ್ನೆಯೇ ಬರುವುದಿಲ್ಲ. ೫೦ ಸೈಕಲ್ಸ್ ಪರಿವರ್ತನೆ ಮಾಡಬೇಕು ಎಂಬ ಉತ್ತರವನ್ನು ತಾವು ಕೊಟ್ಟಿದ್ದೀರಿ. ತಮ್ಮ ಕಾಗದದಲ್ಲಿ ೫೦ ಸೈಕಲ್ಸ್ ಪ್ರಶ್ನೆಯೇ ಇಲ್ಲ ಭಾರತ ಗೋಲ್ಡ್ ಮೈನ್ಸ್‌ನವರಿಗೆ ಏನು ಕಾಗದ ಬರೆದಿದ್ದಾರೆ ಎಂದರೆ ಈ ವಿದ್ಯುತ್‌ಗಾರದಿಂದ ವಿದ್ಯುತ್ತನ್ನು ಇನ್ನು ಮುಂದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು. ನಮಗೆ ಕಬಿನಿ ಹಾಗೂ ಇತರ ಜಲಾಶಯಗಳಿಂದ ನೀರನ್ನು ಡೈವರ್ಟ್ ಮಾಡಬೇಕಾಗುತ್ತದೆ. ನಾವು ಇದನ್ನು ಮುಚ್ಚುತ್ತೇವೆ. ಬೇರೆ ರೀತಿಯ ವ್ಯವಹಾರವನ್ನು ನೋಡಿಕೊಳ್ಳಬೇಕಾಗುತ್ತದೆ, ಎಂಬುದಾಗಿ ಅವರು ಹೇಳಿದ್ದಾರೆ. ಒಂದು ವೇಳೆ ಮುಚ್ಚಿದ ಪ್ರಶ್ನೆ ಬಂದರೆ ೧೬ ಸಾವಿರ ಕುಟುಂಬ ಇವತ್ತು ಬೀದಿ ಪಾಲಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ದಯವಾಡಿ ಉತ್ತರ ಕೊಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ —ಈ ರೀತಿ ಕೇಳಿದರೆ ಉತ್ತರ ಹೇಳುವುದು ಕಷ್ಟವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಅವರಿಗೆ ಅಕ್ಕಪಕ್ಕದವರು ಸ್ವಲ್ಪ ಟ್ರೈನಿಂಗ್ ಕೊಡಬೇಕು.

SRI N. M. ADYANTAYA.—In case the mines are force to close down the impact of this will be felt by the State Government too. Under the circumstances, if there is an instance of supplying power at 50Hz. to be converted into 25 Hz. operated in the Kolar Mines and the rasponsibility for this cannot be avoided by the Karnataka Government.

ಶ್ರೀ ಜೆ. ಎಸ್. ದೇಶ್‌ಮುಖ್.—ಆದನ್ನು ನೋಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿ ಕನ್‌ವರ್ಷನ್‌ಗೆ ೫೦ ಕೋಟಿ ರೂಪಾಯಿ ಆಗುತ್ತದೆ. ಇದನ್ನು ಕಂಟಿನ್ಯೂ ಮಾಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ನೀವು ಅರ್ಧ ಗಂಟೆ ಚರ್ಚೆಗೆ ಬರೆದು ಕಳಿಸಿರಿ

ಪ್ರಶ್ನೆ ಸಂಖ್ಯೆ. ೧೫೭೯ (ಆರ್ ವೆಂಕಟರಾಮಯ್ಯನವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ).

ಪ್ರಶ್ನೆ ಸಂಖ್ಯೆ.—೧೬೮೭

ಚಳ್ಳಕೆರೆ ತಾಲ್ಲೂಕಿನ ವರವುಕಾವಲಿನಲ್ಲಿ ಭೂರಹಿತರಿಗೆ ಭೂಮಂಜೂರಾತಿ

೧೬೮೭. ಶ್ರೀ ಪೂರ್ಣ ಮುತ್ತಪ್ಪ (ಮೊಳಕಾಲ್ಮೂರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಚಳ್ಳಕೆರೆ ತಾಲ್ಲೂಕಿನ ವರವು ಕಾವಲಿನಲ್ಲಿ ಭೂ ರಹಿತರಿಗೆ ಜಮೀನುಗಳನ್ನು ಮಂಜೂರಾಗಿ ಎಷ್ಟು ವರ್ಷಗಳಾಗಿವೆ ?

ಆ) ಮಂಜೂರಾದ ಕಾಲದಲ್ಲಿ ಕೆಲವಿನ್ನೂ ಸೈಟ್ಟಿನಂತೆ ನಂಬರುಗಳನ್ನು ಕೊಟ್ಟು ಹಕ್ಕು ಪತ್ರಗಳನ್ನು ಕೊಟ್ಟಿದ್ದು ಈಚೆಗೆ ಸರ್ವೆ ಇಲಾಖೆಯಿಂದ ಆಕಾರ ಬಂದು ದಿಂಡಸ್ತಾಗಿ ಬೇರೆ ಬೇರೆ ಸರ್ವೆ ನಂಬರುಗಳನ್ನು ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಆಕಾರಬಂದು ದುರಸ್ತಾಗಿ ಎಷ್ಟು ವರ್ಷಗಳಾಗಿದೆ ಈ ಬಗ್ಗೆ ತಾಲ್ಲೂಕು ಕಛೇರಿಗೆ ದಾಖಲೇ ಬಂದಿದೆಯೇ ಕಂದಾಯ ಲೆಕ್ಕ ದಾಖಲೆಗಳಲ್ಲಿ ಸರಕಾರಿ ಎಂತಲೆಲ್ಲ ಇದ್ದು ಭೂ ಮಾಲೀಕರಿಗೆ ಆಗಿರತಕ್ಕ ತೊಂದರೆಯು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಭೂ ಮಾಲೀಕರಿಗೆ ತಹಶೀಲ್ದಾರ್ ಆಫೀಸಿನಲ್ಲಿ ಈವರೆಗೂ ದರಖಾಸ್ತು ಸೈಚ್ಛಿನ ನಂಬರು ಗಳಂತೆ ದಾಖಲೆ ಇದ್ದು ಆಕಾರ ಬಂದು ದುರಸ್ತಿನಂತೆ ಲೆಕ್ಕಾಧಿಕಾರಿ ದಾಖಲೆಗಳಲ್ಲಿ ನಮೂದಿಸಿರುವ ಭೂ ಮಾಲೀಕರಿಗೆ ಆಗಿರತಕ್ಕ ತೊಂದರೆಯನ್ನು ಬಗೆಹರಿಸಲಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಭೂರಹಿತರಿಗೆ ೧೯೫೯-೬೦ನೇ ಸಾಲಿನಲ್ಲಿ ಈಗ್ಗೆ ೨೬ ವರ್ಷಗಳ ಹಿಂದೆ ಸರಕಾರದಲ್ಲಿ ಭೂ ಮಂಜೂರಾತಿಯಾಗಿರುತ್ತದೆ.

ಆ) ಮಂಜೂರಾಗಿರುವುದಕ್ಕಿಂತ ಮುಂಚಿತವಾಗಿ ಸರ್ವೆ ಇಲಾಖೆಯವರು ವರವು ಕಾವಲಿನ ಜಮೀನನ್ನು ಅಳತೆ ಮಾಡಿ ಪೋಡುಗಳಾಗಿ ವಿಂಗಡಣೆ ಮಾಡಿರುತ್ತಾರೆ. ಪೋಡಿನಂತೆ ಮಂಜೂರಾದವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿರುತ್ತಾರೆ.

ಇ) ಆಕಾರ ಬಂದು ದುರಸ್ತಾಗಿ ೨೬ ವರ್ಷಗಳಾಗಿರುತ್ತದೆ. ತಾಲ್ಲೂಕು ಕಛೇರಿಯಲ್ಲಿ ದಾಖಲೆ ಗಳಿರುತ್ತವೆ. ಮಂಜೂರಾದ ಜಮೀನಿನ ದುರಸ್ತಿ ಕಾರ್ಯವು ಮುಗಿದಿದ್ದು ಕೆಲವು ಪ್ರಕಟಣೆಗಳಲ್ಲಿ ದುರಸ್ತಿಯಾಗಿರುವಂತೆ ಕಂದಾಯ ದಾಖಲೆಗಳಲ್ಲಿ ನಮೂದಿಸಿದೆ. ಹಿಂದೆ ಬಿಟ್ಟು ಹೋಗಿರುವುದು ಗಮನಕ್ಕೆ ಬಂದಿರುತ್ತದೆ. ಈ ದುರಸ್ತಾದ ಎಲ್ಲಾ ಪ್ರಕಟಣೆಗಳನ್ನು ಸರ್ವೆ ಇಲಾಖೆಯವಲ್ಲಿರುವ ಆಕಾರ ಬಂದು ದಾಖಲಾತಿಗಳೊಂದಿಗೆ ತಾಳೆ ನೋಡಿ ಆರ್. ಆರ್. ದಾಖಲೆಗಳಲ್ಲಿ ನಮೂದು ಮಾಡಲು ತಹಶೀಲ್ದಾರ್‌ರವರಿಗೆ ನಿರ್ದೇಶನ ಕೊಟ್ಟಿದೆ.

ಈ) ತಾಲ್ಲೂಕು ಕಛೇರಿಯಲ್ಲಿರುವ ಆರ್. ಆರ್. ದಾಖಲೆಗಳಲ್ಲಿ ಮಂಜೂರಾದ ಎಲ್ಲಾ ಪ್ರಕರಣ ಗಳನ್ನು ದುರಸ್ತಿ ಮಾಡಿಕೊಂಡು ನಂತರ ಗ್ರಾಮ ಲೆಕ್ಕಾಧಿಕಾರಿಗಳಲ್ಲಿರುವ ದಾಖಲೆಗಳಲ್ಲಿ ನಮೂದಿಸ ಲಾಗುವುದು.

ಶ್ರೀ ಪೂರ್ಣಮಂತ್ತಪ್ಪ (ಮೊಳಕಾಲ್ಮೂರು).— ಅಧ್ಯಕ್ಷರೇ, ೧೯೫೯-೬೦ ರಲ್ಲಿ ಮಂಜೂರಾಗಿದೆ ಎಂದು ನಿಮಗೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ೧೯೪೧ ರಲ್ಲಿ ಬೋರ್ಡ್ ಆಗಿದೆ. ಆದರಲ್ಲಿ ಮಂಜೂರಾಗಿರುವ ಜಮೀನು. ಅಲ್ಲಿಂದ ೫೧ನೇ ಇಸವಿಯಲ್ಲಿ ಆಕಾರ ಬಂದು ದುರಸ್ತಾಗಿ ೨೬ ವರ್ಷಗಳಾಗಿರುತ್ತದೆ ಎಂದು ತಪ್ಪು ಮಾಹಿತಿಯನ್ನು ಕೊಟ್ಟಿರುತ್ತಾರೆ. ವೆರಿಫೈ ಮಾಡಿ ಸರಿಯಾದ ವ್ಯವಸ್ಥೆ ಮಾಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಪ್ಪಾಗಿದ್ದರೆ ಅದಷ್ಟು ಬೇಗ ಸರಿಪಡಿಸಲಿಕ್ಕೆ ಆಜ್ಞೆ ಕೊಡುತ್ತೇನೆ.

ಅಧ್ಯಕ್ಷರು. — ಶ್ರೀ ಎಸ್. ಜಿ. ನಂಜಯ್ಯನಮಠ್ ಗೈರುಹಾಜರಿ.

ಅಧ್ಯಕ್ಷರು.— ಶ್ರೀ ಆರ್. ನಾಯಕ್ ಗೈರುಹಾಜರಿ.

ಅಧ್ಯಕ್ಷರು.— ಶ್ರೀ ಬಿ. ಬಸವಲಿಂಗಪ್ಪ ಅವರ ಪ್ರಶ್ನೆಯನ್ನು ಮುಂದೂಡಲಾಗಿದೆ.

ಯಾದಗಿರಿ ತಾಲ್ಲೂಕಿನಲ್ಲಿರುವ ಗ್ರಾಮಗಳಿಗಾಗಿ ವಿದ್ಯುಚ್ಛಕ್ತಿ ಸೌಲಭ್ಯಗಳು

೧೩೦೨. ಶ್ರೀ ಮಲ್ಲಿಕಾರ್ಜುನ ಖಾರ್ಗೆ (ಗುರುಮಿಟ್ಕಲ್).— ಮಾನ್ಯ ವಿದ್ಯುಚ್ಛಕ್ತಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಯಾದಗಿರಿ ತಾಲ್ಲೂಕಿನಲ್ಲಿನ ವಿದ್ಯುದ್ದೀಕರಣವಾಗದೇ ಉಳಿದಿರುವ ಗ್ರಾಮಗಳ ಸಂಖ್ಯೆ ತಾಂಡ ಗಳು ವಸತ್ತು ಪಾಳ್ಯಗಳೂ ಸೇರಿ.

ಆ) ಮೇಲಿನ ಗ್ರಾಮಗಳಲ್ಲಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ಮಂಜೂರಾಗಿರುವ ಗ್ರಾಮಗಳು ಪಂತ್ತು ತಾಂಡಗಳ ಸಂಖ್ಯೆ ಎಷ್ಟು ಮತ್ತು ಕೆ. ಇ. ಬಿ. ಯು ಯಾವಾಗ ಈ ಕಾರ್ಯವನ್ನು ಪೂರ್ಣಗೊಳಿಸುತ್ತದೆ.